

# ಐನೂರು ರೂಪಾಯಿ ನೋಟು

ವಸುಮತಿ ಉಡುಪ
ಕಲೆ: ಸಂತೋಷ್ ಸಸಿಹಿತ್ಲು

'ಏ, ಏನ್ಮಾಡ್ತಿದ್ದಿ? ಚೂರು ಬಾ ಇಲ್ಲಿ...'

ಅಮ್ಮನ ದನಿಯಲ್ಲಿದ್ದ ಆತುರ, ಆತಂಕ ಗಮನಿಸಿ ಒಲೆಯ ಮೇಲೆ ಉಪ್ಪಿಟ್ಟಿನ ಒಗ್ಗರಣೆಗೆ ಇಟ್ಟಿದ್ದ ಸಾಸಿವೆ ಸಿಡಿಯುವ ಪುರುಸೊತ್ತೂ ಇಲ್ಲದೆ ಹಾಗೇ ಸ್ಟೌವ್ ಆಫ್ ಮಾಡಿ ಅಮ್ಮನ ಕೋಣೆಗೆ ಧಾವಿಸಿದಳು ನಂದಿನಿ. ಹಾವ್ರೋ, ಚೇಳೋ, ಮತ್ತೊಂದೋ ಅಥವಾ ಅಮ್ಮನಿಗೇನಾದರೂ ತಕ್ಷಣಕ್ಕೆ ಎದೆನೋವು ಕಾಣಿಸಿ, ಕ್ಷಣಾರ್ಧದಲ್ಲಿ ನಾನಾ ಯೋಚನೆಗಳು ಮನಸ್ಸಿನೊಳಗೆ ಸುಳಿದು ಹೋದುವು. ಪೇಟೆ ಮನೆ ಹೌದು. ಆದರೆ ಮೂರು ಹೊತ್ತೂ ಮುಂಬಾಗಿಲನ್ನು ಮುಚ್ಚಿ ಅಗುಳಿ ಹಾಕುವ ಅಭ್ಯಾಸ ಇಲ್ಲ. ಅಮ್ಮನಿಗೆ ಹೇಳಿ ಹೇಳಿ ಗಂಟಲು ಒಣಗಿಸಿಕೊಂಡಿದ್ದೊಂದೇ ಲಾಭ.

'ಏ, ಇಲ್ಲೇ ಕೂತಿರ್ತೀನಲ್ಲೇ, ಅದ್ಯಾವ ಕಳ್ಳ ನನ್ನ ಕಣ್ಣು ತಪ್ಪಿಸಿ ಒಳಗೆ ಬರೋಕೆ ಸಾಧ್ಯ?' ಅನ್ನುವ ಉಡಾಫೆ ಉತ್ತರ.

'ಇದು ನಿಮ್ಮೂರಲ್ಲ ಅಮ್ಮಾ. ಕಣ್ಣು ಮುಚ್ಚಿ ತೆರೆಯೋದ್ರಲ್ಲಿ ಕದ್ದು ಹಾರಿಸ್ತಾರೆ. ಅದ್ಯಾರೋ ವಿಳಾಸ ಕೇಳೋ ನೆಪ ಮಾಡ್ಕಂಡು ಪಕ್ಕದ ಮನೇಗೆ ಬಂದಿದ್ದು ಗೊತ್ತಿಲ್ವಾ? ಅವನು ಹೋದ ಮೇಲೆ ನೋಡಿದ್ರೆ ಟೀಪಾಯಿ ಮೇಲಿದ್ದ ಮೊಬೈಲ್ ಮಂಗಮಾಯ..'

'ಮೈಮೇಲೆ ಎಚ್ಚರ ಇಲ್ದಿದ್ರೆ ಮತ್ತೇನಾಗುತ್ತೆ? ವಿಳಾಸ ಕೇಳಿದೋನನ್ನ ಒಳಗೆ ಯಾಕೆ ಬಿಟ್ಕೊಂಡ್ರಂತೆ?'

'ಬಿಟ್ಕೊಂಡಿದ್ದಲ್ಲ, ಅವನೇ ಬಂದಿದ್ದು'